## ಮುಖವಾಡ ಹೊತ್ತ ಮೀನು

ಮಾನವ ಮುಖದ ಹೋಲಿಕೆಯಿರುವ ಈ ಮತ್ಸ್ಯ ಪ್ರತಿಮೆ ಉಡುಪಿ ಜಿಲ್ಲೆಯ ಸುಪ್ರಸಿದ್ಧ ಮಲ್ಪೆ ಸೀ ವಾಕ್ ಬಳಿ ಇದೆ. ಮತ್ಸ್ಯೋದ್ಯಮಕ್ಕೆ ಹೆಸರುವಾಸಿಯಾಗಿರುವ ಮಲ್ಪೆ ಸಮುದ್ರ ತಟದಲ್ಲಿ ಕಲಾತ್ಮಕವಾಗಿ ಮನಸೆಳೆಯುವ ಸದ್ರಿ ಸೃಜನಶೀಲ ಶಿಲ್ಪಕಲೆ ಮಹಾವಿಷ್ಣುವಿನ ಮತ್ಸ್ಯಾವತಾರವನ್ನು ನೆನಪಿಸುತ್ತದೆ. ಜೊತೆಗೆ ಒಂದು ಪ್ರಭೇದದ ಮೀನಿನ ಮುಖಕ್ಕೆ ಮಾನವ ಹೋಲಿಕೆ ಕಾಣಿಸುತ್ತದೆ. ಈ ಕಾರಣಕ್ಕೆ ಮುಖವಾಡ ಹೊತ್ತ ಮಾನವನ ನಿಜರೂಪವನ್ನೂ ಈ ಪ್ರತಿಮೆ ಅಣಕಿಸುತ್ತಿರಬಹುದೇ?

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ





## ಅಲಂಕಾರಿಕ ಶಕ್ತಿದೇವತೆ

ಪುರಾತನ ಶಕ್ತಿ ಪೀಠಗಳಲ್ಲಿ ಒಂದಾದ ಬಾದಾಮಿಯ ಬನಶಂಕರಿಯ ಶ್ರೀದೇವಿಗೆ ಪ್ರತಿ ವರ್ಷ ನವರಾತ್ರಿ ಮತ್ತು ಜಾತ್ರೆಯಲ್ಲಿ ವಿವಿಧ ಅಲಂಕಾರವನ್ನು ಮಾಡುತ್ತಾರೆ. ಕಳೆದ ನವರಾತ್ರಿಯಲ್ಲಿ ಬಳೆಗಳ ಅಲಂಕಾರ ತುಂಬ ವಿಶೇಷವಾಗಿತ್ತು. ಅದನ್ನು ನೋಡುವುದೇ ಕಣ್ಣಿಗೆ ಹಬ್ಬದಂತಿತ್ತು. ಈ ದೇವಾಲಯಕ್ಕೆ ಶತಮಾನಗಳ ಇತಿಹಾಸವಿದೆ.

—ಮಹಾಂತೇಶ ಬಾಗೇವಾಡಿ

## ಕಲ್ಲಿನ ತೊಟ್ಟಿಗಳು

ಹಿಂದೆ ರಾಜ ಮಹಾರಾಜರ ಕಾಲದಲ್ಲಿ ಅಲ್ಲಲ್ಲಿ ಕಲ್ಲಿನ ತೊಟ್ಟಿಗಳನ್ನು ನಿರ್ಮಿಸುತ್ತಿದ್ದರು. ಬೇಸಿಗೆಯ ಬಿಸಿಲಿನಿಂದ ಬಾಯಾರಿದ ಪಶು, ಪಕ್ಷಿಗಳು ದಾಹ ತೀರಿಸಿಕೊಳ್ಳಲಿ ಎನ್ನುವ ಉದ್ದೇಶದಿಂದ ಅವುಗಳನ್ನು ಮಾಡಸುತ್ತಿದ್ದರು. ಇತ್ತೀಚೆಗೆ ಮೂಡಬಿದಿರೆಯ ಸಾವಿರ ಕಂಬದ ಬಸದಿಗೆ ಹೋದಾಗ ಅದರ ಹೊರಭಾಗದಲ್ಲಿದ್ದ ಕಲ್ಲಿನ ತೊಟ್ಟಿಯನ್ನು ನೋಡಲು ಅದರತ್ತ ಧಾವಿಸಿದೆ. ನೋಡುತ್ತಲೇ ನನ್ನ ಉತ್ಸಾಹ ಜರ್‍ರನೆ ಕುಸಿಯಿತು. ಅದರೊಳಗೆ ನೀರನ್ನು ತುಂಬಿಸಿರಲಿಲ್ಲ. ಕಸ, ಕಿತ್ತುಹೋದ ಚಪ್ಪಲಿಗಳು, ಖಾಲಿ ಬಾಟಲಿಗಳು ತುಂಬಿದ್ದವು. ಇದು ಪರಿಸರ ಪ್ರಜ್ಞೆಯಲ್ಲಿ ಅಂದಿನ ಜನರ ಇಂದಿನ ಜನರ ಮನೋಧರ್ಮದ ಆದ ಬದಲಾವಣೆಯನ್ನು ಬಿಂಬಿಸುವಂತೆ ಇತ್ತು.

—ಮನೋಜ್ ಕುಮಾರ್ ಕೆ.

